ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ.288/2018

ಸಿ.ಡಬ್ಲೂ:6 ಪಿ.ಡಬ್ಲೂ:4

ಸಾಕ್ಷಿಗೆ ದಿನಾಂಕ ಃ-08/02/2024 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ತೌಫಿಕ |
| ತಂ/ಗಂ. ಹೆಸರು | ಮಹಮ್ಮದಹುಸೇನ ಬೇಫಾರಿ |
| ವಯಸ್ಸು | 23 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ದೇವರ ಹಿಪ್ಪರಗಿ |

**ಮುಖ್ಯ ವಿಚಾರಣೆ ಃ ಶ್ರೀ ಎಪಿಪಿ ಯವರಿಂದ**

ಚಾ ಸಾ 1 ಪರಿಚಯ ಇಲ್ಲ. ಉಳಿದ ಸಾಕ್ಷಿದಾರರ ಪರಿಚಯ ಇಲ್ಲ. ನಾನು ಯಾವುದೇ ಅಪಘಾತ ನೋಡಿಲ್ಲ ಮತ್ತು ಅಪಘಾತವಾದ ಕುರಿತು ನಾನು ತನಿಖಾಧಿಕಾರಿ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ . ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಅಪಘಾತ ಯಾವುದೇ ವಿಷಯ ನನಗೆ ಗೊತ್ತಿಲ್ಲ. ನಾನು ಉರ್ದು ಪ್ರೌಢ ಶಾಲೆ ದೇವರ ಹಿಪ್ಪರಗಿಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ನನ್ನ ಶಾಲೆಗೆ ಸರಿಯಾಗಿ ಹೋಗಿಲ್ಲ.

( ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅದಕ್ಕೆ ಆರೋಪಿ ಪರ ವಕೀಲರು ಯಾವುದೇ ತಕರಾರು ವ್ಯಕ್ತಪಡಿಸದ ಕಾರಣ ಮತ್ತು ಸಾಕ್ಷಿಯು ಪ್ರತ್ಯೇಕ್ಷ ಸಾಕ್ಷಿಯಾಗಿದ್ದು ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಪಾಟೀ ಸವಾಲು ಃ ಎ.ಪಿ.ಪಿ. ಯವರಿಂದ

ನನ್ನ ಸಹಪಾಠಿಗಳಾದ ಚಾ ಸಾ 5,7 ಮತ್ತು 9 ನನ್ನ ಜೊತೆ ಓದುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 06-12-2017 ರಂದು ಬೆಳಿಗ್ಗೆ 9.30 ಗಂಟೆಗೆ ನಾವು ಶಾಲೆಯಲ್ಲಿ ಊಟಕ್ಕೆ 2 ಗಂಟೆಗೆ ಹೊರಗಡೆ ಬಂದಾಗ ನಾವು ಆ ಸಮಯದಲ್ಲಿ ಚಾ ಸಾ 5,7 ಮತ್ತು 9 ರವರೊಂದಿಗೆ ವಾಲಿಬಾಲ್ ಆಟ ಆಡುತ್ತಿದ್ದಾಗ ಆರೋಪಿ ತನ್ನ ವಾಹನ ಕೆಎ/28 ಟಿಸಿ/0026 ನೇದನ್ನು ಅತೀ ವೇಗವಾಗಿ ನಿಸ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಯವಾಗುವ ರೀತಿಯಿಂದ ನಡೆಸಿಕೊಂಡು ಬಂದು ನಮ್ಮಜೊತೆ ಆಟ ಆಡುತ್ತಿದ್ದ ಖಾಲಿದ ಇತನಿಗೆ ಹಾಯಿಸಿ ಅಪಘಾತಪಡಿಸಿರುತ್ತಾನೆ ಎಂದರೆ ಸರಿಯಲ್ಲ. ನಂತರ ನಾನು ಮತ್ತು ಚಾ ಸಾ 4 ಹೋಗಿ ನೋಡಲು ಖಾಲಿದ ಇತನಿಗೆ ಬಲಗೈ

ಮುಂಡಿಗೆ ಮೊಣಕಾಲಿನ ಕೆಳಗೆ ಭಾರಿ ಗಾಯ ಪೆಟ್ಟಾಗಿದ್ದು ನಂತರ ಆತನನ್ನು ಆತನ ತಂದೆ ಮತ್ತು ಚಿಕ್ಕಪ್ಪ ಖಾಸಗಿ ಜೀಪನಲ್ಲಿ ಹಾಕಿಕೊಂಡು ವಿಜಯಪೂರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತ ಆರೋಪಿತನ ತಪ್ಪಿನಿಂದಾಗಿ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ದಿನಾಂಕ 08-12-2017 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಗೆ ಭಾಗವನ್ನು ಅಲ್ಲಗಳೆದಿದ್ದರಿಂದ ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇರುವುದಿಲ್ಲವೆಂದು ಹೇಳಿರುತ್ತಾರೆ.

ಮರು ವಿಚಾರಣೆ ಃ ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ